# ಮಾನಸ ಗಂಗೋತ್ರಿ

Issue 21 Volume 53

ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

## ಜಾಗೃತಿಯ ಸಂಕೇತವಾಗಿ ಬಾಬಾ ಸಾಹೇಬರ ಜನ್ಮ ದಿನಾಚರಣೆ



**ಮೈಸೂರು:** ಅಂಬೇಡ್ಕರ್‌ರವರ 127 ನೇ ಜನ್ಮದಿನಾ ಚರಣೆ ಅಂಗವಾಗಿ ಮಾನಸ ಗಂಗೋತ್ರಿಯ ಗ್ರಂಥಾಲಯದ ಮುಂಭಾಗದಲ್ಲಿರುವ ಅಂಬೇಡ್ಕರ್ ರವರ ಪ್ರತಿಮೆಗೆ ಪುಷ್ಪಾರ್ಚನೆಯನ್ನು ಮಾಡುವ ಮೂಲಕ ಪ್ರೊ.ದಯಾನಂದ ಮಾನೆಯವರು ನಮನ ಸಲ್ಲಿಸಿದರು. ತದನಂತರ ಮೈಸೂರು ವಿ.ವಿಯ ಕುಲಪತಿಗಳಾದ ಪ್ರೊ. ಬಸವರಾಜು ರವರು ಮಧ್ಯರಾತ್ರಿ 12 ಗಂಟೆಗೆ ಆಗಮಿಸಿ, ಕೇಕ್ ಕತ್ತರಿ ಸುವ ಮೂಲಕ ಅಂಬೇಡ್ಕರ್‌ರವರ ಜಯಂತಿ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಕಳೆದ 5 ತಿಂಗಳ ಹಿಂದೆ ಅಂಬೇಡ್ಕರ್‌ರವರ ಪುತ್ಥಳಿ ಸ್ಥಾಪನೆಯಾಗಿದ್ದು, ಮೈಸೂರು ವಿವಿಯ ಮಾನಸ ಗಂಗೋತ್ರಿಯ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ಮಧ್ಯರಾತ್ರಿ ಅಂಬೇಡ್ಕರ್‌ರವರ ಜಯಂತಿಯನ್ನು ಆಚರಿಸಿದ್ದರಿಂದ ಇದು ಇತಿಹಾಸದ ಪುಟಗಳಲ್ಲಿ ಅಡಕವಾಯಿತು. ಈ ಕಾರ್ಯಕ್ರಮವನ್ನು ಮೈಸೂರು ವಿವಿಯ ಸಂಶೋಧಕ ಸಂಘದವರು ನಡೆಸಿಕೊಟ್ಟರು. ಹಾಗೂ ಕಾರ್ಯಕ್ರಮದಲ್ಲಿ ಮೈಸೂರು ವಿವಿಯ ವಿದ್ಯಾರ್ಥಿಗಳು, ಸಂಶೋಧಕರು, ಮತ್ತು ಪ್ರಾಧ್ಯಾಪಕರು ಸಾಕ್ಷಿಯಾಗಿದ್ದರು. ಈ ಕಾರ್ಯಕ್ರಮವನ್ನು ಉದ್ದೇಶಿಸಿ, ಮಾತನಾಡಿದ ಕುಲಪತಿಗಳಾದ ಪ್ರೊ.ಬಸವರಾಜು ರವರು ಅಂಬೇಡ್ಕರ್‌ರವರು ಕೊಟ್ಟಂತಹ ಸಂವಿಧಾನದ ಹಕ್ಕುಗಳ ರಕ್ಷಣೆಯ ಜವಾಬ್ದಾರಿ ನಮ್ಮದಾಗಿದೆ. ನಾವು ಮಧ್ಯರಾತ್ರಿಯಲ್ಲಿ ಈ ಜಯಂತಿಯನ್ನು ಆಚರಿಸುವ ಮೂಲಕ ನಾವು ನಿದ್ರಿಸುತ್ತಿಲ್ಲ. ಎಚ್ಚರಿಕೆಯಿಂದಿದ್ದೇವೆ, ಜಾಗೃತರಾಗಿ ದ್ದೇವೆ ಎಂಬ ಸಂದೇಶವನ್ನು ಸಮಾಜಕ್ಕೆ ಕಳುಹಿಸುತ್ತಿದ್ದೇವೆ. ದಲಿತರ ಮೇಲಿನ ದೌರ್ಜನ್ಯ ಗಳು ಮತ್ತು ಸಂವಿಧಾನದಲ್ಲಿರುವ ಎಸ್.ಟಿ, ಎಸ್.ಸಿ ಕಾಯ್ದೆಯನ್ನು ಸುಪ್ರೀಮ್ ಕೋರ್ಟ್ ದುರ್ಬಲಗೊಳಿಸಲು ಹೊರಟಿರು ವುದಕ್ಕೆ ನಾವು ಖಂಡಿಸಬೇಕು. ಹಕ್ಕುಗಳಿಗೆ ಇವತ್ತಿನ ದಿನದಲ್ಲಿ ಹಕ್ಕುಚ್ಯುತಿಯಾಗುತ್ತಿದೆ. ಮತ್ತು ದಲಿತರ ಮೇಲೆ ಸಾರ್ವಜನಕ ವಲಯದಲ್ಲೂ ಸಹ ಅಧಿಕಾರಿ ಗಳಾಗಿದ್ದರೂ ಸಹ ಅವರ ವೇದನೆ ಸಹ ನಲ್ಲದಂತಾ ಗಿದೆ. ಆದ್ದರಿಂದ ಅಂಬೇಡ್ಕರ್ ಹೋರಾಟವನ್ನು ಮೈಗೂಡಿಸಿಕೊಳ್ಳಬೇಕು, ನಾವು ಜಾಗೃತರಾಗಿ ಇತರ ವ್ಯಕ್ತಿಗಳಿಗೂ ಸಹ ಜಾಗೃತಿ ಮೂಡಿಸಬೇಕು. ಅಂಬೇಡ್ಕರ್‌ರವರು ಹೇಳಿರುವಂತೆ ಶಿಕ್ಷಣ ಎಂಬುದು ಹುಲಿಯ ಹಾಲಿನಂತೆ ಅದನ್ನು ಕುಡಿದವ ಘರ್ಜಿಸಲೇ ಬೇಕು ಎಂದು ವಿದ್ಯಾರ್ಥಿಗಳು ತಿಳಿಸಿದರು. ಅವರು ಹೋರಾಟದ ಹಂತದಲ್ಲಿ ಕಷ್ಟಗಳನ್ನೇ ಮೆಟ್ಟಿನಂತರು, ನಾನು ನನ್ನ ಸಮಾಜವನ್ನು ಬಹಳಷ್ಟು ಪ್ರೀತಿಸುತ್ತೇನೆ, ಆದರೆ ಅವರು ಅರಿವೆ ಇಲ್ಲದ ರೀತಿ ವರ್ತಿಸುತ್ತಿದ್ದಾರೆ ಎಂದು ಕೊನೆಯ ಘಟ್ಟದಲ್ಲಿ ಅಂಬೇಡ್ಕರ್‌ರವರ ಕೊನೆಯ ಮಾತಾಗಿತ್ತು. ನಾವು ಬಾಬಾಸಾಹೇಬರ ವಾರಾಸ್ದಾರರು, ಅವರ ಚಿಂತನೆಗಲನ್ನು ಮೈಗೂಡಿಸಿ ಕೊಳ್ಳ ಬೇಕು ಎಂದು ತಿಳಿಸಿದರು. ತದನಂತರ ಅಂತಿಮ ಘಟ್ಟದಲ್ಲಿ ವಿದ್ಯಾರ್ಥಿಗಳು ಅಂಬೇಡ್ಕರ್ ರವರ ಹಾಡಿಗೆ ಕುಣಿದುಕುಪ್ಪಳಿಸಿ ಸಂಭ್ರಮಿಸಿದರು.

ಈ ಕಾರ್ಯಕ್ರಮದಲ್ಲಿ ಪರೀಕ್ಷಾಂಗ ಕುಲಸಚಿವರಾದ ಪ್ರೊ.ಸೋಮಶೇಖರ್‌ರವರು, ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷರಾದ ಪವನ್ ಕುಮಾರ್‌ರವರು, ಮಹದೇವಸ್ವಾಮಿ, ಮಹೇಶ್ ಸೋಸ್ಲೆ, ಅರುಣ್, ಮನುಮಾವಿನಹಳ್ಳಿ ಹಾಜರಿದ್ದರು.

## ವಿದ್ಯಾರ್ಥಿಗಳು ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಿ: ಮಂಡ್ಯ ರಮೇಶ್



**ಸ್ಪರ್ಧೆಗಳ ಕಾರ್ಯ ಕ್ರಮವನ್ನು ಖ್ಯಾತ ಚಲನಚಿತ್ರ ನಟ ಹಾಗೂ ರಂಗಭೂಮಿ ನಿರ್ದೇಶಕ ಮಂಡ್ಯರಮೇಶ್ ಅವರು ಚಾಲನೆ ನೀಡಿದರು.**

**ಮೈಸೂರು :** ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಿದ್ಯಾರ್ಥಿಗಳ 2017–18ನೇ ಸಾಲಿನ ಅಂತರ್ ಕಾಲೇಜು ಸಾಹಿತ್ಯಿಕ & ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯ ಕ್ರಮವನ್ನು ಖ್ಯಾತ ಚಲನಚಿತ್ರ ನಟ ಹಾಗೂ ರಂಗಭೂಮಿ ನಿರ್ದೇಶಕ ಮಂಡ್ಯರಮೇಶ್ ಅವರು ಚಾಲನೆ ನೀಡಿದರು. ಮುಖ್ಯ ಅತಿಥಿಯಾಗಿ ಖ್ಯಾತ ಚಲನಚಿತ್ರ ನಟಿ ಹಾಗು ಕಿರುತರೆ ಕಲಾವಿದೆ ಶ್ವೇತಾಚೆಂಗಪ್ಪ ಅವರು ಆಗಮಿಸಿದ್ದರು.

ಕಾರ್ಯಕ್ರಮ ಉದ್ಘಟಿಸಿದ ನಂತರ ಮಾತನಾಡಿದ ಮಂಡ್ಯರಮೇಶ್ ಅವರು ಇಂದು ನಮ್ಮ ಕನಸುಗಳನ್ನು ಆಕಾರ ಮಾಡಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ಈ ಅವಕಾಶಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಿ, ಹಿಂದಿನ ಕಾಲದಲ್ಲಿ ಅವಕಾಶಗಳು ಕಡಿಮೆ ಇತ್ತು ಎಂದು ಹಿಂದೆ ಕಲ್ಬುರ್ಗಿ, ಶಿವಮೊಗ್ಗದಲ್ಲಿ ಇದೇ ರೀತಿಯ ಪಠ್ಯೇತರ ಚಟು ವಟಿಕೆಗಳ ಕಾರ್ಯ ಕ್ರಮಗಳಿಗೆ ಹೋಗಿದೆ, ಅಲ್ಲಿ ಸಾವಿರಾರು ವಿದ್ಯಾರ್ಥಿಗಳು ಸೇರಿದ್ದರು. ಆದರೆ ಒಂದು ಕಾಲದ್ಲಿ ಸಾಹಿತ್ಯಾತ್ಮಕ ವಾಗಿ, ಸಾಂಸ್ಕೃತಿಕವಾಗಿ ಭವ್ಯ ಪರಂಪರೆ ಹೊಂದಿದ್ದ ಕಾಲೇಜಿನಲ್ಲಿ 250 ವಿದ್ಯಾ ರ್ಥಿಗಳು ಇಲ್ಲ ವಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದರು. ನಂತರ ಶ್ವೇತಾ ಚೆಂಗಪ್ಪ ರವರು ಮಾತನಾಡಿ ಮಜಾಟಾಕೀಸ್ ನಲ್ಲಿನ ತಮ್ಮ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಕ್ಷೇಮ ಚಾಲನ ನಿರ್ದೇಶಕರಾದ ಎಂ.ಸ್.ಬೆಂಜಮಿನ್, ಪರಿಕ್ಷಾಂಗ ಕುಲಸಚಿವರಾದ ಸೋಮ ಶೇಖರ್ ಹಾಗೂ ಇನ್ನತರರಿದ್ದರು

## ವರ್ಣರಂಜಿತ ಯುವ ಸಂಭ್ರಮಕ್ಕೆ ಚಾಲನೆ

**ಮೈಸೂರು ಸೆ:** ವಿಶ್ವವಿಖ್ಯಾತ ಮೈಸೂರು ದಸರಾ ಅಂಗವಾಗಿ ಸೆಪ್ಟೆಂಬರ್ 12ರಂದು ಯುವದಸರಾ ಕಾರ್ಯಕ್ರಮವನ್ನು ಮಾನಸ ಗಂಗೋತ್ರಿಯ ಬಯಲುರಂಗಮಂದಿರದಲ್ಲಿ ವರ್ಣರಂಜಿತ ಕಾರ್ಯಕ್ರಮ ವನ್ನು ಮಾನ್ಯ ಮೈಸೂರು ನಗರದ ಪ್ರಥಮ ಪ್ರಜೆಯಾದ ಎಂ.ಜೆ.ರವಿಕುಮಾರ್ ರವರು ಚಾಲನೆ ನೀಡಿದರು. ಈ ವೇಳೆ ಕನ್ನಡದ ನಟಿ ಕಾರುಣ್ಯ ರಾಂ ರವರು ಸಹಾ ಇದ್ದರು.

ಉದ್ಘಾಟನೆಯ ನಂತರ ಮೇಯರ್‌ರವರು ಮಾತನಾಡಿ ಯುವಸಂಭ್ರಮ ಕಾರ್ಯಕ್ರಮ ಚಾಮುಂಡೇಶ್ವರಿಯ ಸಂಭ್ರಮ ದಲ್ಲಿ ಶುಭ ಮಂಗಳವಾರ ದಂದು ಶುರುವಾಗಿದೆ. ಈ ಕಾರ್ಯ ಕ್ರಮದಲ್ಲಿ 145 ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಎಲ್ಲರಿಗೂ ಶುಭವಾಗಲಿ, ನಮ್ಮ ಪ್ರಜೆಗಳನ್ನು ಹೊರತರಲು ಉತ್ತಮವಾದ ವೇದಿಕೆ. ಇದನ್ನು ಬಳಸಿಕೊಳ್ಳಿ ಎಂದು ಶುಭಕೋರಿದರು. ಇನ್ನು ಉಪ ವಿಶೇಷಾಧಿಕಾರಿಗಳು ಯುವ ದಸರಾ ಉಪ ಸಮಿತಿ ಹಾಗೂ ಜಿಲ್ಲಾ ಪೋಲೀಸ್ ಬಲಿಷ್ಠಾಧಿ ಕಾರಿಗಳಾದ ರವಿ.ಡಿ.ಚೆನ್ನಪ್ಪರವರು ಮಾತನಾಡಿ ಯುವದಸರಾ ರಸದೌತಣ ಪಡೆಯಲು ಬಂದಿರುವ ತಮಗೆಲ್ಲ ಮುಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲು ಜಿಲ್ಲಾಡಳಿತ ಹಾಗೂ ಸರ್ಕಾರ ಈ ಕಾರ್ಯ ಕ್ರಮ ಆಯೋಜಿಸಲಾಗಿದೆ ಬಳಸಿಕೊಳ್ಳಿ ಎಂದು ನೆರೆದಿದ್ದ ವರಿಗೆ ಹರ್ಷ ತುಂಬುವ ಮಾತುಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಮಲ್ಲಿಗೆ ವೀರೇಶ್, ನಯಮಾ ಸುಲ್ತಾನ್, ನಜೀರ್ ಅಹಮ್ಮದ್, ಜಿ.ಜಗದೀಸ್, ರಾಕೇಶ್, ಪಾಪಣ್ಣ, ರಾಕೇಶ್ ಗೌಡ ಮುಂತಾದವರು ಉಪಸ್ಥಿತರಿದ್ದರು.

## ಸಂಪಾದಕೀಯ

# ಪ್ರಸ್ತುತ ಸಮಾಜದಲ್ಲಿ ಶಿಕ್ಷಣದ ಮಹತ್ವ

ಶಿಕ್ಷಣದ ಮಹತ್ವದ ಬಗ್ಗೆ ಶಿಕ್ಷಣ ತಜ್ಞ □ಸ್ಪೆನ್ಸರ್□ ಎಂಬಾತ ನಾಲ್ಕು ವಿಚಾರಗಳನ್ನು ಮೂಡಿಸುತ್ತಾನೆ ಆತ್ಮಗೌರವ, ಜೀವನದ ಅನೂಕಲತೆ, ಮಕ್ಕಳ ಲಾಲನೆ ಪಾಲನೆ ಒಳ್ಳೆಯ ನಾಗರೀಕನಾಗಲು ಸಂಸ್ಕೃತಿ, ಸಾಹಿತ್ಯ ಲಲಿತಕಲೆ ಆಸ್ವಾದನೆಗಾಗಿ ವಿದ್ಯೆ ಬೇಕು.

ಶಿಕ್ಷಣದಿಂದ ತಮ್ಮ ಕಾಲ ಮೇಲೆ ತಾವು ನಲ್ಲುವ ಮೂಲಕ ಆತ್ಮಗೌರವದಿಂದ ಬದುಕುವುದು ಒಂದು ಮಹತ್ವದ ವಿಚಾರ.ಕಲಿತು ಉದೋಗಿಗಳಾಗಿ ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳುವುದರ ಜೊತೆಗೆ ನಮ್ಮ ಜೀವನಕ್ಕೆ ಬೇಕಾದ ಅನುಕೂಲತೆಗಳನ್ನೂ ಸಹಾ ನಾವ್ರೂ ಮಾಡಿಕೊಳ್ಳ ಬೇಕಾಗುತ್ತದೆ.ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಯಾರ ಮೇಲು ಅವಂಬನೆ ಇಲ್ಲದೆ ಸ್ವತಂತ್ರ್ಯ ಬದುಕನ್ನು ಬದುಕಲು ಶಿಕ್ಷಣ ಸಹಕಾರಿ ಎರಡನೆಯದಾಗಿ ಮದುವೆ ಮಕ್ಕಳು ಆಗಿ ಸಂಸಾರಸ್ಥನಾದಾಗ ಮಡದಿ ಮಕ್ಕಳನ್ನು ಪೋಷಿಸುವ ಅವರ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿಯೂ ಮನೆಯ ಯಜಮಾನನ ಮೇಲೆ ಇರುತ್ತದೆ.ಇಂದಿನ ಕಾಲದಲ್ಲಿ ಶಿಕ್ಷಣ ಉದ್ಯೋಗ ಇಲ್ಲದ ಗಂಡನನ್ನು ಯಾವ ಹೆಣ್ಣು ಮದುವೆ ಮಡಿಕೊಳ್ಳಲು ಇಪ್ಪುವುದಿಲ್ಲ. ಯಾಕೆಂದರೆ ತನ್ನ ಮಗಳು ಜೀವನದ ಭದ್ರತೆ ಬಗ್ಗೆ ಹೆಣ್ಣು ಹೆತ್ತವರಿಗೂ ಕಾಳಜಿ ಇರುತ್ತದೆ.ಆದರಿಂದ ಸಂಸಾರ ಸಾಧಿಸಲು ಬೇಕಾದ ಸಾಮಂರ್ಥ್ಯವನ್ನು ಗಳಿಸಿಕೊಳ್ಳುವುದು ಅಷ್ಟೇ ಮುಖ್ಯ ಶಿಕ್ಷಣ ಇದಕ್ಕೆ ಪೂರಕವಾಗುತ್ತದೆ.



ಒಳ್ಳೆಯ ಶಿಕ್ಷಣ ದಿಂದ ಒಳ್ಳೆಯ ಉದ್ಯೋಗ ಬದುಕಲು ಹಣ ಗಳಿಸುವುದು ಮಕ್ಕಳನ್ನು ಬೆಳೆದುವುದೆಂದರೆ ಬರಿಯ ಹೊಟ್ಟೆ ಬಟ್ಟೆ ನೋಡುವುದಷ್ಟೇ ಅಲ್ಲ ಅವರನ್ನು ಮುಂದೆ ಸಮಾಜದಲ್ಲಿ ಉತ್ತಮ ನಾಗರಿಕನಾಗಿ ಬೆಳೆಸುವ ಜವಾಬ್ದಾರಿಯೂ ಹೆತ್ತವರದ್ದು ಅವರಿಗೆ ಬೇಕಾದ ಸಂಸ್ಕೃತಿ, ನಾಗರಿಕ ಪ್ರಜೆಯ ಬಗ್ಗೆ ತಿಳಿ ಹೇಳಿ ಮನೆಗೂ ಸಮಾಜಕ್ಕೂ ಬೇಕಾದ ವ್ಯಕ್ತಿಯಾಗಿ ರೂಪುಗೊಳ್ಳುವಂತೆ ಮಾಡುವುದು. ಅಗತ್ಯ ಮಾತ್ರವಲ್ಲ ಶಿಕ್ಷಣ ಬರಿ ತಾನು ಬದುಕಲು ತನ್ನ ಹೆಂಡತಿ ಮಕ್ಕಳನ್ನು ಸಾಕುವಷ್ಟೇ ಸೀಮಿತವಾದಲ್ಲಿ ಬದುಕಿಗೊಂದು ಸೌಂದರ್ಯ, ಸುಖ ದಿಗಲಾರದು ಶಿಕ್ಷಣ ಯುವಕರನ್ನು ಪ್ರಕೃತಿ ಸೌಂದರ್ಯ ಆರಾಧಕರಾಗಿ ಸಾಹಿತ್ಯ, ಲಲಿತಕಲೆಗಳ ಬಗ್ಗೆ ಪ್ರೇಮ ಉಳ್ಳವರಾಗಿ ಮಾಡಬೇಕು ಆಗ ಮಾತ್ರ ಆತ ಪರಿಪೂರ್ಣ ವ್ಯಕ್ತಿಯಾಗಲಿಕ್ಕೆ ಸಾದ್ಯವಿದೆ ಇಂದು ನಮ್ಮ ಪ್ರಕೃತಿ ಸಂಸ್ಕೃತಿಳೆರಡೂ ವಿಕೃತಿಗಳಾಗುತ್ತಿರುವುದಕ್ಕೆ ವದ್ಯಾವಂತ ಯುವಕರಲ್ಲಿ ಆ ಬಗ್ಗೆ ಯಾವುದೇ ಜ್ಞಾನವಾಗಲಿ, ಪ್ರೀತಿಯಾಗಲಿ, ಆಸಕ್ತಿಯಾಗಲೀ ಇರುವುದೇ ಕಾರಣವಾಗಿದೆ. ವಿದ್ಯೆ ಮಕ್ಕಳ ಮನಸ್ಸಿನಲ್ಲಿ ಬಾಲ್ಯದಿಂದಲೇ ಪ್ರೀತಿ, ಆಸಕ್ತಿಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಬೇಕು ಬರಿ ಹೊಟ್ಟೆ ಪಾಡಿಗಾಗಿ ವಿದ್ಯೆ ಎನ್ನುವಂತಾಗದೆ ವಿದ್ಯೆ ನಮ್ಮ ಮಕ್ಕಳ ದೈಹಿಕ ಮಾನಸಿಕ ಬೌದ್ಧಿಕ, ನೈತಿಕ ಬೆಳವಣಿಗೆಗೆ ಪೂರಕವಾಗಬೇಕು. ಜೀವನ ಮೌಲ್ಯಗಳನ್ನೊಳಗೊಂಡ ಇಂಥಾ ಶಿಕ್ಷಣ ಸಿಕ್ಕಿದಾಗ ನಮ್ಮ ಮುಂದಿನ ಜನಾಂಗದ ಭವಿಷ್ಯ ಆ ಮೂಲಕ ಸಾಮಾಜದ ಭವಿಷ್ಯ ದೇಶದ ಭವಿಷ್ಯ ಉಜ್ವಲವಾಗುವುದರಲ್ಲಿ ಸಂದೇಹವಿಲ್ಲ.


## ಪತ್ರಿಕೆ ರಚನೆ

**ಪುಟ ವಿನ್ಯಾಸ**
**ತ್ಯಾಗರಾಜು. ಎಂ**
**ಸೋಮಶೇಖರ್. ಎಂ**

**ಛಾಯಾಚಿತ್ರಗಾರ**
**ಸುನೀಲ್ ಗದೆಪ್ಪಗೋಳ್**

**ವರದಿಗಾರರು**
**ಸಂಜಯ್ ಬಿ.ಸಿ**
**ಶಾಂತರಾಜು**

**(ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಗಳು)**


# ನಮ್ಮ ಉದ್ದೇಶ ಸಮಾನತೆಯಾದರೆ ಅದಕ್ಕೆ ಬೇಕಿರುವ ಶಿಕ್ಷಣ ವ್ಯವಸ್ಥೆ ಇದಾಗಿದೆಯೇ?



**ಯುವಾಂದೋಲನ**

**ಸೋಮಶೇಖರ್.ಎಂ**

ಶಿಕ್ಷಣದ ಪರಿಣಾಮವು ಅದರ ಉದ್ದೇಶವನ್ನು ಅವಲಂಬಿಸಿದೆ. ಒಂದು ದೇಶದ ಶಿಕ್ಷಣ ವ್ಯವಸ್ಥೆಯನ್ನು ಹೇಗೆ ರೂಪಿಸಲಾಗಿರುತ್ತದೆ ಎಂಬುದರ ಮೇಲೆ ಅದೊಂದು ಸಿದ್ಧಸೂತ್ರ ವೆಂಬಂತೆ ಇರುವ ವ್ಯವಸ್ಥೆಯ ಪುನರಾವರ್ತನೆಗೆ ಬಳಕೆಯಾಗುತ್ತದೋ ಅಥವಾ ಅದನ್ನು ಕಲಿತ ಯುವಜನತೆ ವಿಮರ್ಶಾತ್ಮಕ ದೃಷ್ಟಿಯನ್ನು ಬೆಳೆಸಿಕೊಂಡು ತಾವು ಬದುಕುತ್ತಿರುವ ಪ್ರಪಂಚದ ಪರಿವರ್ತನೆಗೆ ಪ್ರಯತ್ನಿಸುತ್ತಾರೋ ಎಂಬುದು ನಿರ್ಧರಿಸಲ್ಪಡುತ್ತದೆ ಎಂದು ಖ್ಯಾತ ಶಿಕ್ಷಣ ತಜ್ಞ ಹಾಗೂ ಚಿಂತಕ ಪಾಲೋ ಫ್ರೈರೆ ಬರೆಯುತ್ತಾನೆ. ಇಂದು ಸಮಕಾಲೀನ ಸಮಾಜದ ಆಗುಹೋಗುಗಳನ್ನು ಗಮನಿಸುತ್ತಿರುವ ನಾವುಗಳೆಲ್ಲರೂ ನಮ್ಮೆದುರು ಈ ಪ್ರಶ್ನೆಯನ್ನು ಹಾಕಿಕೊಳ್ಳಬೇಕಿದೆ; ಇಂದು ನಮಗೆ ಬೇಕಿರುವ ಶಿಕ್ಷಣ ವ್ಯವಸ್ಥೆ ಎಂಥದ್ದು?

ಭಾರತ ಹಲವು ವರ್ಗ, ಜಾತಿ, ಪ್ರಾಂತ, ಭಾಷೆ, ಧರ್ಮ ಮೊದಲಾದ ವೈವಿಧ್ಯತೆಯನ್ನು ಹೊಂದಿದೆ ಎಂಬ ಸಂಗತಿ ಪದೇ ಪದೇ ಹೇಳಿ–ಕೇಳಿ ಕ್ಲೀಷೆಯಾಗಿಬಿಟ್ಟಿದೆ. ಆದರೆ ಅಲ್ಲಿ ವೈವಿಧ್ಯತೆ ಮಾತ್ರ ಇದ್ದರೆ ತೊಂದರೆ ಇರಲಿಲ್ಲ, ಅಲ್ಲಿ ಶ್ರೇಣೀಕರಣ ಇದೆ ಮತ್ತು ಪ್ರತಿಯೊಂದೂ ಮತ್ತೊಂದರೊಂದಿಗೆ ಸಂಬಂಧ ಹೊಂದಿದ್ದು ಸಂಕೀರ್ಣವಾದ ಸಾಮಾಜಿಕ ರಚನೆಯಾಗಿದೆ. ಇಂತಹ ಸನ್ನಿವೇಶದಲ್ಲಿ ಪ್ರತಿಯೊಂದು ಜನಸಮುದಾಯವೂ ತಮ್ಮದೇ ಆದ ತತ್ವ, ನಂಬಿಕೆ, ಆದರ್ಶಗಳನ್ನು ಪಾಲಿಸುವಂತೆಯೇ, ಇತರರ ಬಗ್ಗೆಯೂ ತಿಳಿಯು ವುದು ಸಹಬಾಳ್ವೆಯ ದೃಷ್ಟಿಯಿಂದ ಅತ್ಯಗತ್ಯ. ಇದನ್ನೇ ಭಾರತದ ಬಹುಚರ್ಚಿತ ಶಿಕ್ಷಣ ಆಯೋಗ ಕೊಥಾರಿ ಕಮಿಷನ್ ತನ್ನ ವರದಿಯಲ್ಲಿ ಹೇಳಿರುವುದು.



ಭಾರತದ ಶಿಕ್ಷಣ ವ್ಯವಸ್ಥೆ ಕಡ್ಡಾಯವಾಗಿ ಸಮಾನ ಶಾಲಾ ವ್ಯವಸ್ಥೆಯೇ ಆಗಿರಬೇಕು; ಅದು ಕೇವಲ ಬಡವರಿಗೆ ಉತ್ತಮ ಶಿಕ್ಷಣ ದೊರಕಬೇಕೆಂಬ ದೃಷ್ಟಿಯಿಂದ ಮಾತ್ರವಲ್ಲ, ಮೇಲ್ವರ್ಗಗಳ ಮಕ್ಕಳಿಗೆ ಈ ದೇಶ ಏನು ಎಂಬುದರ ಅರಿವಾಗಬೇಕು ಎಂಬ ದೃಷ್ಟಿಯಿಂದಲೂ ಸಹಾ ಎಂದು ಆಯೋಗ ಸ್ಪಷ್ಟ ಮಾತುಗಳಲ್ಲಿ ಹೇಳುತ್ತದೆ. ಇಷ್ಟೊಂದು ಸಂಕೀರ್ಣವಾದ ಸಮಾಜೋ ಸಾಂಸ್ಕೃತಿಕ ಹೆಣಿಗೆಯುಳ್ಳ ಒಂದು ಸಮಾಜದಲ್ಲಿ ಬೆಳೆಯುವ ಮಕ್ಕಳು ಬೇರೆ ಬೇರೆ ಪೆಟ್ಟಿಗೆಗಳಲ್ಲಿರುವಂತೆ ತಮ್ಮ ವರ್ಗದ ಮಕ್ಕಳಷ್ಟೇ ಬರುವ ಶಾಲೆಗಳಿಗೆ ಸೀಮಿತವಾದಾಗ ಏನಾಗಬಹುದು? ತಮ್ಮದೇ ದೇಶದಲ್ಲಿ ಇದೇ ಸಮಯದಲ್ಲಿ ಬದುಕುತ್ತಿರುವ ಇನ್ನಿತರ ಹಲವು ಜನಸಮುದಾಯಗಳ ಜೀವನ ಪದ್ಧತಿ, ಅವರ ಶಕ್ತಿ, ಅವರೆದುರಿಸುವ ಸಮಸ್ಯೆಗಳು, ಸಮಾಜಕ್ಕೆ ಅವರ ಕೊಡುಗೆ ಮುಂತಾದವುಗಳ ಬಗ್ಗೆ ಅರಿವು–ಸಹಾನುಭೂತಿ ಬೆಳೆಯುವುದು ಹೋಗಲಿ, ಕನಿಷ್ಟ ಮಟ್ಟದ ಪ್ರಾಥಮಿಕ ಮಾಹಿತಿ ವಿನಿಮಯವೂ ಇಲ್ಲದ ಸಾಮಾಜಿಕ ಶೈಕ್ಷಣಿಕ ವಾತಾವರಣ ಇಂದು ರೂಪುಗೊಂಡಿದೆ. ಹೀಗಾಗಿಯೇ ಸ್ವತಃ ಮೀಸಲಾತಿಯ ಉಪಯೋಗ ಪಡೆದಂತಹ ಕುಟುಂಬಗಳಲ್ಲೇ ಹೊಸ ತಲೆಮಾರು ಮೀಸಲಾತಿಯನ್ನು ಉಗ್ರವಾಗಿ ವಿರೋಧಿಸುತ್ತದೆ. ತಮ್ಮ ಧಾರ್ಮಿಕ ಸಂಪ್ರದಾಯಗಳನ್ನಷ್ಟೇ ವೈಭವೀಕರಿಸುವ ವಾತಾವರಣ ಕಂಡ ಮಕ್ಕಳ ಪಾಲಿಗೆ ಅನ್ಯ ಸಮುದಾಯಗಳೆಲ್ಲರೂ ತಮ್ಮ ನಂಬಿಕೆಗಳಿಂದ ದೇಶಕ್ಕೆ ಹಾನಿ ಮಾಡುವವರಂತೆ ಕಂಡುಬರುತ್ತಾರೆ! ಎಲ್ಲಕ್ಕೂ ಮಿಗಿಲಾಗಿ ಜೊತೆಗೂಡಿ ದೇಶ ಕಟ್ಟುವ ಪರಿಕಲ್ಪನೆಯೇ ಅವರ ಮಟ್ಟಿಗೆ ಅಪರಿಚಿತವಾಗುತ್ತದೆ!

ಇದರ ದುಷ್ಪರಿಣಾಮಗಳನ್ನು ಈಗಾಗಲೇ ಉಣ್ಣುತ್ತಿದ್ದೇವೆ. ನವ ಉದಾರೀಕರಣದ ಕಾಲಘಟ್ಟದ ಬೆಳವಣಿಗೆಗಳಿಂದ ಹೀಗಾಗುತ್ತಿದೆ ಎಂದ ಮಾತ್ರಕ್ಕೆ ಹಿಂದಿದ್ದುದೆಲ್ಲ ರಮ್ಯವಾಗಿತ್ತು–ಆದರ್ಶಮಯವಾಗಿತ್ತು ಎಂದು ಅರ್ಥವಲ್ಲ! ಆದರೆ, ಆ ಹಿಂದಿನ ಸಮಸ್ಯೆಗಳನ್ನು ಮೀರುವತ್ತ ಹೋಗುವ ಬದಲು ವಿನಾಶದತ್ತ ಹೊರಟಿರುವ ಶಿಕ್ಷಣ ವ್ಯವಸ್ಥೆಗೆ ತುರ್ತು ಶಸ್ತ್ರಕ್ರಿಯೆ ಆಗಲೇ ಬೇಕು. ಪಾಲೋ ಫ್ರೈರೆ ಹೇಳಿರುವಂತೆ ಇಂದಿಗೆ ತೆರೆಮರೆಗೆ ಸರಿಯು ತ್ತಿರುವ ಸಮಾನತೆ–ಸಾಮಾಜಿಕ ನ್ಯಾಯದ ತತ್ವಗಳ ಆಧಾರದಲ್ಲಿ ನಮ್ಮ ದೇಶ ಬೆಳೆಯಬೇಕು, ನಮ್ಮ ಸಮಾಜ ರಚಿಸಲ್ಪಡಬೇಕು ಎಂಬ ಉದ್ದೇಶ ನಮಗಿರುವುದೇ ಆದಲ್ಲಿ, ಅಂತಹ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ಹೋರಾಡುವುದೂ ಸಹ ನಮ್ಮ ಜವಾಬ್ದಾರಿ ಯಾಗುತ್ತದೆ.

## ವಾಚಕರ ಪತ್ರ

### ಜೀವ ಘಾತುಕ ಪಟಾಕಿ ಬೇಡ

ಪಟಾಕಿಯಿಂದ ಸಂತಸಕ್ಕಿಂತ ನೋವೇ ಹೆಚ್ಚು ಕೇರಳದಲ್ಲಿ ನಡೆದ ದುರಂತ ಸುಡುಮದ್ದು ಪ್ರಿಯರಿಗೆ ಪಾಠ ಕಲಿಸಬೇಕು. ಸತ್ತರೂ ಪಟಕಿ, ಹುಟ್ಟಿದರೂ ಪಟಾಕಿ ಎಂಬ ಸಂಪ್ರದಾಯ ಅಸಂಬದ್ಧ. ಇದರಿಂದ ಜೀವಹಾನಿ, ಆರೋಗ್ಯಕ್ಕೆ ತೊಂದರೆ, ಪರಿಸರಕ್ಕೂ ಮಾರಕ. ಪಟಾಕಿ ಸಿಡಿಸುವಿದಕ್ಕೆ ಏನೇ ಸಮರ್ಥನೆಗಳಿದ್ದರೂಅದನ್ನು ಪರಿಗಣಿಸದೆ ನಿಷೇಧಿಸುವುದೇ ಒಳತು.

– **ರಜಿನಿಕಾಂತ್**, ಮಂಡ್ಯ

### ಗಂಗೋತ್ರಿ ಬಳಿ ಏಕಿಲ್ಲ ಬಸ್ ನಿಲುಗಡೆ

ನಗರದ ಬಸ್ ನಿಲ್ದಾಣದಿಂದ ಬೋಗಾದಿಗೆ ಹೋಗುವ ಬಸ್‌ಗಳು ಸಂಜೆವೇಳೆಯಲ್ಲಿ ಗಂಗೋತ್ರಿಯ ಬಳಿ ನಿಲ್ಲಿಸದೇ ಸಾಗುತ್ತಿದ್ದು, ಇದರಿಂದ ಬೋಗಾದಿಯ ಕಡೆ ಸಾಗುವ ವಿದ್ಯಾರ್ಥೀಗಳು ತೊಂದರೆ ಅನುಭವಿಸುತ್ತಿದ್ದು, ದಯವಿಟ್ಟು ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನ ಹರಿಸಿ ವಿದಗಯರ್ಥಿಗಳಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಿ.

**ಅಂಜಲಿ**, ಮಾನಸ ಗಂಗೋತ್ರಿ ಮೈಸೂರು

# ಕಲೆ ಸಾಹಿತ್ಯ ಸಂಸ್ಕೃತಿಯ ಹಿರಿಮೆ ಮೇಲುಕೋಟೆ

ಕಾವೇರಿ ತೀರದಲ್ಲಿ ಸಮೃದ್ಧವಾಗಿ ಕಬ್ಬು ಬೆಳೆಯುವ ಸಕ್ಕರೆಯ ನಾಡು ಅಕ್ಕರೆಯ ಬೀಡು ಮಂಡ್ಯ ಜಿಲ್ಲೆಯಲ್ಲಿರುವ ಐತಿಹಾಸಿ ಪುಣ್ಯಕ್ಷೇತ್ರ ಮೇಲುಕೋಟೆ. ಇದು ಪುಣ್ಯಕ್ಷೇತ್ರವಷ್ಟೇ ಅಲ್ಲ ಸಮುದ್ರ ಮಟ್ಟದಿಮದ ಸುಮಾರು 3600 ಅಡಿಗಳಷ್ಟು ಎತ್ತರದಲ್ಲಿರುವ ಅಘೋಷಿತ ಗಿರಿಧಾಮ.

ಸಂಸ್ಕೃತಿ, ಕಲೆ, ಸಾಹಿತ್ಯ, ಪೌರಾಣಿಕ, ಐತಿಹಾಸಿಕ ಮತ್ತು ಶಿಲ್ಪಕಲೆಗಳ ತವರೂರಾದ ಮೇಲುಕೋಟೆಯು ಕರ್ನಾಟಕದ ಸುಪ್ರಸಿದ್ಧ ಯಾತ್ರಾಸ್ಥಳವಾಗಿದ್ದು, ಗಿರಿ ಶಖರಗಳಿಂದ ಕೂಡಿದ್ದು ಇಲ್ಲಿ 101 ದೇಗುಲಗಳು ಹಾಗೂ 101 ಕಲ್ಯಾಣಿಗಳನ್ನು ಹೊಂದಿರುವ ಸುಂದರ ದೇಗುಲಗಳ ಬೀಡು. ದಕ್ಷಿಣ ಭಾರತದ ಶ್ರೀ ವೈಷ್ಣವ ಕ್ಷೇತ್ರಗಳೆಂದು ಖ್ಯಾತವಾಗಿರುವ ನಾಲ್ಕು ಪುಣ್ಯಕ್ಷೇತ್ರಗಳ ಪೈಕಿ ಮೇಲುಕೋಟೆಯೂ ಒಂದು. ಐತಿಹಾಸಿಕ, ಪೌರಾಣಿಕ ಹಾಗೂ ಸಾಹಿತ್ಯಿಕವಾಗಿ ಬೆಳೆದ ಮೇಲುಕೋಟೆಯ ಬೆಟ್ಟದ ಸಾಲಿನಲ್ಲಿ ಹೊಯ್ಸಳರ ಕಾಲದ ಯೋಗನರಸಿಂಹ ದೇವಾಲಯ, ಬೆಟ್ಟದ ಕೆಳಗಿರುವ ಕಲ್ಯಾಣಿ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪದ ಕಟ್ಟಡಗಳು ಆಧುನಕ ತಂತ್ರಜ್ಞಾನಕ್ಕೆ ಸವಾಲಾಗಿದೆ. ಚಿಕ್ಕದೇವರಾಜ ಒಡೆಯರು ರಾಜಗೋಪುರದ ಮೆಟ್ಟಿಲಿಗಳನ್ನು ನಿರ್ಮಿಸಿ ಕೊಟ್ಟಿರುವುದಲ್ಲದೆ ದೇವರಿಗೆ ಅನೇಕ ಒಡವೆ ಹಾಗೂ ರಾಜಮುಡಿಗಳನ್ನು ಕೊಡುಗೆ ಯಾಗಿ ನೀಡಿದ್ದಾರೆ.



ಮೇಲುಕೋಟೆಯಲ್ಲಿ ವಿಶೇಷವಾಗಿ ವರ್ಷಕ್ಕೊಮ್ಮೆ ಶ್ರೀಕೃಷ್ಣ ರಾಜಮುಡಿ ಹಾಗೂ ವೈರಮುಡಿ ಬ್ರಹ್ಮೋತ್ಸವಗಳು ವೈಭವದಿಂದ ಹತ್ತು ದಿನಗಳ ಕಾಲ ನಡೆಯುತ್ತದೆ. ಇದರಲ್ಲಿ ವಿಶೇಷವಾಗಿ ವೈರಮುಡಿ ಹೆಚ್ಚು ಪ್ರಸಿದ್ಧವಾಗಿದೆ, ಈ ಉತ್ಸವಕ್ಕೆ ರಾಜ್ಯದ ಮುಲೆ ಮೂಲೆಗಳಿಂದ ಲಕ್ಷಾಂತರ ಭಕ್ತರು ಚಲುವ ನಾರಾಯಣಸ್ವಾಮಿಯು ಕಿರೀಟ ಧಾರಣೆಯ ದರ್ಶನ ಪಡೆಯಲು ಬರುತ್ತಾರೆ. ಇಲ್ಲಿ ವಿಶೇಷವಾಗಿ 260 ಅಡಿ ಚಚ್ಚೌಕಾಕಾರದ ಕಲ್ಯಾಣಿ ಯನ್ನು ನೋಡಬಹುದು, ಈ ಕಲ್ಯಾಣಿಯಿಂದ ಮೇಲುಕೋಟೆಗೆ 6 ಕಿ.ಮೀ. ಸಮೀಪದಲ್ಲಿರುವ ಗುಡುಗನಹಳ್ಳಿಯ ಸಿದ್ದನಕಟ್ಟೆಗೆ ನೀರು ಹರಿಯುವ ಸಂಪರ್ಕವಿದೆ ಎಂಬ ಪ್ರತೀತಿಯಿದೆ. ಚಲುವ ನಾರಾಯಣಸ್ವಾಮಿ ದೇವಾಲಯದ ಹೊರ ಮತ್ತು ಒಳಗೆ ಕೈಸಾಲೆಗಳನ್ನು ಹೊಂದಿದ್ದು, ಸಭಾಮಂಟಪ ದಲ್ಲಿರುವ ನೂರು ಕಲ್ಲು ಕಂಬಗಳಲ್ಲಿ ರಾಮಾಯಣ, ಮಹಾಭಾರತದ ಪ್ರಮುಖ ಸನ್ನಿವೇಷಗಳ ಚಿತ್ರಗಳನ್ನು, ಪಾಕಶಾಲೆ, ಯೋಗ ಶಾಲೆಗಳಲ್ಲಿ ನವರಂಗ ಮಂಟಪ ಗಳನ್ನೊಳಗೊಂಡಿರುವುದು ಪ್ರಮುಖ ಆಕರ್ಷಣೆಯಾಗಿದೆ. 150 ಅಡಿ ಎತ್ತರದ ರಾಯಗೋಪುರವನ್ನು ಒಂದೇ ರಾತ್ರಿಯಲ್ಲಿ ನಿರ್ಮಿಸಲಾಗಿದ್ದು ಇದು ರಾಜ್ಯದಲ್ಲೇ ವಿಶಿಷ್ಟತೆಯನ್ನು ಪಡೆದುಕೊಂಡಿದೆ ಎಂದು ಇತಿಹಾಸ ತಿಳಿಸುತ್ತದೆ.

ಹಲವಾರು ರೀತಿಯ ವಿಶೇಷತೆಯನ್ನು ಪಡೆದುಕೊಂಡು ಪ್ರವಾಸಿಗರನ್ನು ತನ್ನತ್ತ ಸೆಳೆಯುವ ಶ್ರೀ ಕ್ಷೇತ್ರ ಮೇಲುಕೋಟೆಯು ನಮ್ಮ ಮಂಡ್ಯ ಜಿಲ್ಲೆಯಲ್ಲಿರುವುದು ಮಂಡ್ಯ ಜನತೆಯ ಹಿರಿಮೆಗೆ ಪಾತ್ರವಾಗಿದೆ.

ಸೋಮಶೇಖರ್. ಎಂ

## ಚೇತನ ಎಂದಾದರೂ ವಿಕಲವಾಗಲು ಸಾಧ್ಯವೇ?



ಮಳ್ಳವಳ್ಳಿ ತಲ್ಲೂಕಿನ ಹಲಗೂರು ಹೋಬಳಿಯ ದಡಮಹಳ್ಳಿ ಗ್ರಮದ ಬಸವೇಶ್‌ರವರು ದೈಹಿಕ ಅಂಗವಿಕಲರಾಗಿದ್ದು. ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಸುಮಾರು 30 ವರ್ಷ ವಯಸ್ಸಿನ ಯುವಕರಾದ ಬಸವೇಶ್ ಹೆತ್ತವರಿಗೆ ಯಾವುದೇ ಹೊರೆಯಾಗದೆ ತಮ್ಮ ಬದುಕನ್ನು ಸವಾಲಾಗಿ ಸ್ವೀಕರಿಸಿ ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆ. ಗ್ರಾಮ ಪಂಚಾಯಿತಿ ಗುಮಾಸ್ತನಾಗಿ ಕೆಲಸಮಾಡುತ್ತಿರುವ ಬಸವೇಶ್ ಅಂಗವಿಕಲರಿಗೆ ಸ್ಪೂರ್ತಿಯಾಗಿ ಸೋಮಾರಿಗಳಿಗೆ ಮಾರ್ಗದರ್ಶಿಯಾಗಿ ಕಂಗೊಳಿತ್ತಿದ್ದಾರೆ. ಮನುಷ್ಯನಗೆ ಕಾಲು ಮುಖ್ಯಅಂಶವಾಗಿದೆ ಆದರೆ ಬಸವೇಶ್ ಅವರು ತಮ್ಮ 22ನೇ ವಯಸ್ಸಿನಲ್ಲಿ ಅಪಘಾತಕ್ಕೀಡಾಗಿ ಕಾಲು ಕಳೆದು ಕೊಂಡಿದ್ದರು. ಆದರೆ ಈ ಆಘಾತದಿಂದ ಧೃತಿಗೆಡದ ಇವರು ತಮ್ಮ ಉದ್ಯೋಗವನ್ನು ತುಂಬಾ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದಾರೆ. ಇವರ ತಂದೆ ಬೋರೆಗೌಡ, ತಾಯಿ ಲಕ್ಷ್ಮಮ್ಮ. ಬಸವೇಶ್ ಅವರು ವಿದ್ಯಾರ್ಹತೆ ಪಿಯುಸಿ ಆಗಿದ್ದು, ಇವರು ಎಸ್‌ಎಸ್‌ಎಲ್‌ಸಿಯಲ್ಲಿ 80% ಹಾಗೂ ಪಿಯುಸಿಯಲ್ಲಿ 85% ಅಂಕಗಳನ್ನು ಪಡೆದು ತೇರ್ಗಡೆ ಹೊಂದಿದ್ದರೆ. ಇವರು ಗುಮಾಸ್ತ ಕೆಲಸ ಅಲ್ಲದೆ ಕೃಷಿಯಲ್ಲಿಯೂ ಸಹ ತೊಡಗಿಸಿಕೊಂಡಿದ್ದು, ತಮ್ಮ ಹೊಲದಲ್ಲಿ ಕಬ್ಬಿನ ಕಳೆ ಕೀಳುವುದು, ಜಮೀನನ್ನು ಉಳುಮೆ ಮಾಡುವುದನ್ನು ಬಿಟ್ಟು ಬೇರೆ ಎಲ್ಲಾ ರೀತಿಯ ಕೃಷಿ ಕೆಲಸಗಳನ್ನು ಮಾಡುವಲ್ಲಿಯೂ ಸಹ ಯಶಸ್ವಿಯಾಗಿದ್ದಾರೆ.

ಇವರಿಗೆ ವಿದ್ಯಾರ್ಥಿಗಳೆಂದರೆ ತುಂಬಾ ಒಲವು ಆದ್ದರಿಂದ ಇವರು ಬಡ ವಿದ್ಯಾರ್ಥಿಗಳಿಗೆ ತಮ್ಮ ಕೈಯಲ್ಲಿ ಆದಷ್ಟು ಸಹಾಯವನ್ನು ಮಾಡುತ್ತಾರೆ.

ಒಟ್ಟಾರೆಯಾಗಿ ವಸವೇಶ್ ಅವರ ಕಾಯಕ ನಿಷ್ಠೆಗೆ ಗ್ರಾಮದಲ್ಲಿ ಹೆಸರು ವಾಸಿಯಗಿದ್ದಾರೆ ಹಾಗೂ ಇವರು ಎಲೆಮರೆಯಕಾಯಿಯಂತೆ ಬಾಳಿ ಬದುಕುತ್ತಿದ್ದಾರೆ ಅಂಗವಿಕಲರಾದರು ಮನಸ್ಸುಮಾಡಿದರೆ ಎಂಥಹ ಸಾದನೆಯನ್ನು ಮಾಡಬಹುದುಎಂಬುದಕ್ಕೆ ಬಸವೇಶ್‌ರವರು ಉದಾಹರಣೆಯಾಗಿದ್ದಾರೆ.

ತ್ಯಾಗರಾಜು. ಎಂ

**ಮಂಡ್ಯ ಜಿಲ್ಲೆಯ ಮಾದೇಗೌಡನ ಕೊಪ್ಪಲು ಎಂಬ ಹಳ್ಳಿಯಲ್ಲಿ ಜನಸಿ ವಿದ್ಯಾರ್ಥಿ ವಯಸ್ಸಿನಂದಲೇ ಸಮಾಜಕ್ಕೋಸ್ಕರ ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಂಡು ವಿದ್ಯಾರ್ಥಿ ಚಳುವಳಿಗಳಲ್ಲಿ ಮುಂಚೂಣಿ ಯಲ್ಲಿ ನಂತು □ಕರ್ನಾಟಕ ವಿದ್ಯಾರ್ಥಿ ಸಂಘಟನೆ□ ಕಟ್ಟುವಲ್ಲಿ ನಿರತರಾಗಿ, ಸಮಾಜದಲ್ಲಿನ ಸಮಸ್ಯೆ ಮತ್ತು ಅನ್ಯಾಯದ ವಿರುದ್ಧ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ ಮುತ್ತುರಾಜ್‌ರವರ ಸಂದರ್ಶನ.**

**1) ನೀವು ವಿದ್ಯಾರ್ಥಿ ದೆಸೆಯಿಂದ ಚಳುವಳಿಯೆಡೆಗೆ ಬರಲು ಕಾರಣವಾದ ಸಂಗತಿ ಯಾವುದು?**

ನಾನು ವಿದ್ಯಾರ್ಥಿಯಾಗಿದ್ದಾಗ ಹಾಸ್ಟೆಲ್‌ನಲ್ಲಿ ಓದುತ್ತಿದ್ದೆ ಅಲ್ಲಿ ಅವ್ಯವಹಾರ ನಡೆಯುತ್ತಿದ್ದವು ಅದನ್ನು ನೋಡಿ ಪ್ರತಿಭಟಿಸಬೇಕು ಎನಿಸಿತು. ಪ್ರತಿಭಟನೆಗೆ ಹೋದಾಗಲೇ ತಿಳಿದಿದ್ದು ಹಾಸ್ಟಲ್‌ನಲ್ಲಿ ಮಾತ್ರವಲ್ಲ ಸಮಾಜದಲ್ಲೂ ಅವ್ಯವಹಾರ ನಡೆಯುತ್ತಿದೆ ಎಂದು ಹಾಗಾಗಿ ಚಳುವಳಿಯೆಡೆಗೆ ಬರಬೇಕಾಯಿತು.

**2) ನೀವು ಸಮಾಜ ಸೇವೆಯಲ್ಲಿ ತೊಡಗಿಕೊಳ್ಳಲು ಕಾರಣವೇನು?**

ಸಮಾಜ ಸೇವೆ ಎನ್ನುವುದಕ್ಕಿಂತ ನಮ್ಮ ಸೇವೆ ಸಮಾಜದ ಕರ್ತವ್ಯ ಎಂದು ತಿಳಿದುಕೊಳ್ಳುತ್ತೇನೆ. ಸಮಾಜದಲ್ಲಿ ಹೆಣ್ಣುಮಕ್ಕಳ ಮೇಲೆ, ರೈತರ ಮೇಲೆ ದೌರ್ಜನ್ಯ ನಡೆಯುತ್ತಲೆ ಇದೆ ಇವೆಲ್ಲವನ್ನು ಸರಿಮಾಡಲು ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದೇನೆ.

**3) ರಾಜ್ಯದಲ್ಲಿ ಎಷ್ಟೋ ಸಂಘಟನೆಗಳಿವೆ ಆದರೆ ಕ.ವಿ.ಸಂ ಅನ್ನು ಆಯ್ಕೆ ಮಾಡಿಕೊಳ್ಳಲು ಕಾರಣವೇನು?**

ನಮ್ಮ ವಿಚಾರಣೆಗೆ ನಡೆಯುವಂತಹ ಸಂಘಟನೆ ಎಂದರೆ ಅದು ಕರ್ನಾಟಕ ಜನಶಕ್ತಿಯಾಗಿದೆ. ಯಾಕೆಂದರೆ ಗಂಡು ಹೆಣ್ಣು ಎಂಬ ಭೇಧ ಭಾವ, ರೈತರ ವಿಚಾರ, ಧರ್ಮದ ವಿಚಾರ, ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ತಡೆಯುವುದು ಒಟ್ಟಾರೆ ಕರ್ನಾಟಕದ ಸಮಗ್ರ ವಿಚಾರವನ್ನು ಕುರಿತು ಹೋರಾಟ ಮಾಡುತ್ತದೆ ಹಾಗಾಗಿ ನಾನು ಈ ಸಂಘಟನೆಯನ್ನು ಆಯ್ಕೆ ಮಾಡಿಕೊಂಡಿದ್ದೇನೆ.

**4) ನಿಮ್ಮ ಸಂಘಟನೆಯ ಮುಖ್ಯ ಧ್ಯೇಯಗಳೇನು?**

ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಶೋಷಣೆ ಮಾಡಬಾರದು. ಒಂದು ದೇಶ ಮತ್ತೊಂದು ದೇಶವನ್ನು ಶೋಷಣೆ ಮಾಡಬಾರದು. ಶೋಷಣೆ ರಹಿತವಾಗಿ ಸಮಸಮಾಜ ಬರಬೇಕು. ಮನುಷ್ಯ ಶಾಂತಿ, ಗೌರವ, ಪ್ರೀತಿ, ವಿಶ್ವಾಸದಿಂದ ಇರಬೇಕು ಅದಕ್ಕೆ ನಮ್ಮ ಸಂಘಟನೆಯು ಎಷ್ಟು ಶ್ರಮಿಸಬೇಕೋ ಅಷ್ಟನ್ನು ಮಾಡುತ್ತದೆ ಇದು ನಮ್ಮ ಸಂಘಟನೆಯ ಧ್ಯೇಯವಾಗಿದೆ.

**5) ನೀವು ಪೂರ್ಣಾವಧಿ ಕಾರ್ಯಕರ್ತರಾಗಿದ್ದೀರಿ ನಮ್ಮ ಖರ್ಚನ್ನು ಯಾರು ಭರಿಸುತ್ತಾರೆ?**

ನಾವು ಈ ಸಮಾಜಕ್ಕೆ ಕೆಲಸ ಮಾಡುತ್ತಿರುವುದರಿಂದ ನಮಗೆ ಈ ಸಮಾಜವೇ ಭರಿಸಬೇಕು ಎಂದುಅಂದು ಕೊಳ್ಳುತ್ತೇನೆ. ನನ್ನ ಪ್ರತಿ ತಿಂಗಳ ಖರ್ಚು 4000 ಹಾಗಾಗಿ ಈ 4000 ರೂಗಳನ್ನು ಸಂಘಟನೆ ಭರಿಸಬೇಕು ಯಾಕೆಂದರೆ ನಮ್ಮ ಸಂಘಟನೆಯಾವುದೇ ರಾಜಕೀಯ ಪಕ್ಷಗಳೊಂದಿಗೆ ಸೇರಿಲ್ಲ. ನಮ್ಮ ಸಂಘಟನೆಗೆ ಬಹಳಷ್ಟು ಜನರು ಕಾರ್ಮಿಕರು, ರೈತರು, ಶಿಕ್ಷಕರು, ಸರ್ಕಾರಿ ನೌಕರರು ಎಲ್ಲರು ಸಂಘಟನೆ ಯ ಖರ್ಚಿಗೆಂದು ಪ್ರತಿ ತಿಂಗಳು ಅವರ ಕೈಲಾದಷ್ಟು ಹಣವನ್ನು ಸಹಾಯ ಮಾಡು ತ್ತಾರೆ. ಅದರಲ್ಲಿ ನನ್ನ ಪ್ರತಿ ತಿಂಗಳ ಖರ್ಚನ್ನು ನೋಡಿಕೊಳ್ಳುತ್ತಿದ್ದೇನೆ.




**6) ನಿಮ್ಮ ಸಂಘಟನೆಯು ಮುಖ್ಯವಾಗಿ ಯಾವ ವಿಷಯದ ಪರವಾಗಿ ಹೋರಾಟ ಮಾಡುತ್ತಿದೆ?**

ನಮ್ಮ ಸಂಘಟನೆಯು ಸತ್ಯದ ಪರವಾಗಿ, ನ್ಯಾಯದ ಪರವಾಗಿ, ಶೋಷಣೆಯ ವಿರುದ್ಧದ ಪರವಾಗಿ, ಸಮಾನತೆಯ ಪರವಾಗಿ ಹೋರಾಟ ಮಾಡುತ್ತಿದೆ.

**7) ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ನಡೆಯುತ್ತಲೇ ಇದೆ ಇದರ ಬಗ್ಗೆ ನಮ್ಮ ಅಭಿಪ್ರಾಯವೇನು?**

ರೈತರ ಆತ್ಮಹತ್ಯೆಗಳು ಎನ್ನುವುದಕ್ಕಿಂತ ಸರ್ಕಾರ ಮಾಡಿದಂತಹ ಕೊಲೆಗಳು ಎಂದು ಕರೆಯಬೇಕು. ರೈತರು ಬೆಳೆದಂತ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ರೈತರು ಮಾಡಿದಂತಹ ಸಾಲಗಳನ್ನು ತೀರಿಸಲು ಅವರಿಂದ ಆಗುತ್ತಿಲ್ಲ. ಸರ್ಕಾರ ರೈತರ ಸಾಲ ಮನ್ನಾ ಮಾಡಲು ಮುಂದಾಗುತ್ತಿಲ್ಲ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರವೇ ನೇರ ಕಾರಣವಾಗಿದೆ.

**8) ಶಿಕ್ಷಣದ ಭಾಗವಾಗಿ ಡಬ್ಲ್ಯೂಟಿಒ ಮತ್ತು ಗ್ಯಾಟ್ ಒಪ್ಪಂದದ ಕುರಿತು ನಮ್ಮ ಅಭಿಪ್ರಾಯವೇನು?**

ಶಿಕ್ಷಣ ಕ್ಷೇತ್ರದಲ್ಲಿ ಗ್ಯಾಟ್ ಒಪ್ಪಂದವು ನಡೆಯುತ್ತಲೇ ಇದೆ. ಕಾರಣ ನಮ್ಮ ಶಾಲಾ ಕಾಲೇಜುಗಳು ಕಳಪೆ ಎಂದು ತೋರಿಸಿ ವಿದೇಶಿ ಶಾಲಾ–ಕಾಲೇಜುಗಳು ನಮ್ಮ ಭಾರತಕ್ಕೆ ಬರುತ್ತಿವೆ ಇದರಿಂದ ನಮ್ಮ ಭಾರತದ ಶಾಲಾ–ಕಾಲೇಜುಗಳು ನಶಿಸಿ ಹೋಗುತ್ತದೆ ಹಾಗಾಗಿ ನಮ್ಮ ಸಂಘಟನೆಯು ಇದರ ವಿರುದ್ಧವೂ ಹೋರಾಟ ಮಾಡುತ್ತಿದೆ. ಡಬ್ಲ್ಯೂಟಿಒ ಮತ್ತು ಗ್ಯಾಟ್ ಒಪ್ಪಂದದ ಬಗ್ಗೆ ಸರ್ಕಾರವು ಯಾವುದೇ ಮಾಹಿತಿ ನೀಡದೆ ಗೌಪ್ಯವಾಗಿ ಇಡಲಾಗಿದೆ.

**9) ಸಮಾಜದ ಈ ವ್ಯವಸ್ಥೆ ಬದಲಾಗುತ್ತೆ ಎನ್ನುವ ನಂಬಿಕೆ ನಿಮಗೆ ಇದೆಯೇ?**

ಸಮಾಜದಲ್ಲಿ ಎಷ್ಟೋ ರೀತಿಯ ಸಂಕಷ್ಟಗಳು ಬದಲಾಗಿದೆ ಹಾಗೆಯೇ ಈ ವ್ಯವಸ್ಥೆಯೂ ಕೂಡ ಖಂಡಿತ ಬದಲಾಗುತ್ತದೆ ಎನ್ನುವ ನಂಬಿಕೆ ನನಗಿದೆ.

# ಸವರ್ಣೀಯರ ವಿರುದ್ಧ ಸಿಡಿದೆದ್ದ ಮಾರಿಕೊಂಡವರು



ದೇವನೂರು ಮಹಾದೇವ ಬರೆದ ಮಾರಿಕೊಂಡವರು ಮತ್ತು ಡಾಂಬರು ಬಂದದು ಕತೆಗಳನ್ನು ಸೇರಿಸಿ ಒಂದು ಸಿನಿಮಾ ಮಾಡಿದ್ದಾರೆ. ನಿರ್ದೇಶಕ ಕೆ.ಶಿವರುದ್ರಯ್ಯ, ಈಗಾಗಲೇ ರಾಜ್ಯ ಮಟ್ಟದ ದ್ವಿತೀ ಯ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನೂ ತನ್ನದಾಗಿಸಿಕೊಂಡಿದೆ ಮಾರಿ ಕೊಂಡವರು ಚಿತ್ರ. ಗ್ರಾಮ ವೊಂದರಲ್ಲಿ ಮೇಲ್ಜಾತಿಯ ದಬ್ಬಾಳಿಕೆ, ತಂತ್ರಗಳಿಗೆ ಯಾವ ರೀತಿ ದಲಿತ ವರ್ಗ ಬಲಿಯಾಗುತ್ತಿದೆ ಎನ್ನುವುದನ್ನು ಮನೋಜ್ಞವಾಗಿ ತೆರೆಗೆ ತಂದಿದ್ದಾರೆ ಶಿವರುದ್ರಯ್ಯ. ಊರಿಗೆ ಡಾಂಬರು ರಸ್ತೆಯಾದರೆ ತನ್ನ ಮರಳು ಸಾಗಾಣಿಕೆ ದಂಧೆ ಇನ್ನಷ್ಟು ಚೆನ್ನಾಗಿ ನಡೆಯುತ್ತದೆ ಎಂಬ ಸ್ವಾರ್ಥ ಇರುವ ಪಟೇಲ, ದಲಿತನ ಸುಂದರ ಹೆಂಡತಿಯನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಪಟೇಲನ ಮಗ(ದಿಲೀಪ್ ರಾಜ್), ರಸ್ತೆಗಾಗಿ ದಲಿತರ ಅಂಗೈ ಅಗಲ ಜಮೀನನ್ನು ಕಬಳಿಸುವ ಹುನ್ನಾರ, ಇದರ ವಿರುದ್ಧ ಬಂಡೆದ್ದ ದಲಿತ ಯುವಕರ ಗುಂಪು, ಹೀಗೆ ಸಿನಿಮಾದ ಕತೆ ಸಾಗುತ್ತದೆ. ಮೂರು ಕತೆಗಳನ್ನು ಎಲ್ಲೂ ಅಸಂಬದ್ಧ ಅನ್ನಸದ ರೀತಿಯಲ್ಲಿ ಚೆನ್ನಾಗಿ ಸೇರಿಸಿ ಒಂದು ಕತೆಯಾಗಿಸಿದ್ದಾರೆ.

ದಲಿತ ನಾಯಕ ಮಹಾದೇವ ವಿದ್ಯಾವಂತ. ದಲಿತರ ಮೇಲೆ ನಡೆಯುವ ದೌರ್ಜನ್ಯ, ಮೇಲ್ಜಾತಿಯ ದಬ್ಬಾಳಿಕೆಯನ್ನು ವಿರೋಧಿಸುತ್ತಾನೆ. ಮರಳು ದಂಧೆಯನ್ನು, ರಸ್ತೆಗಾಗಿ ದಲಿತರ ಜಮೀನನ್ನು ವಶಪಡಿಸಿಕೊಳ್ಳುವುದನ್ನು ತಡೆಯಲು ಪ್ರಯತ್ನಿಸುತ್ತಾನೆ. ಇದೆಲ್ಲದರ ನಡುವೆ ಮುಗ್ಧ ಹಳ್ಳಿಗರು ಪಟೇಲನ ನಯವಂಚಕತನಕ್ಕೆ ಹೇಗೆ ಮಾರುಹೋಗುತ್ತಾರೆ ಎನ್ನುವುದನ್ನ ಪರಿಣಾಮಕಾರಿಯಾಗಿ ತೋರಿಸಲಾಗಿದೆ. ಸಮಾಜದಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರ ವರೆಗೂ ಸವರ್ಣೀಯರು ಹೇಗೆ ನಡೆಸಿಕೊಳ್ಳುತ್ತಾರೆ, ಅಧಿಕಾರಿಗಳ ಲಂಚಕೋರತನ, ಉಳ್ಳವರು ತಮ್ಮ ಪ್ರಭಾವದಿಂದ ಹೇಗೆ ಎಲ್ಲಾ ಕಡೆ ಗೆಲ್ಲುತ್ತಾರೆ ಎನುವುದನ್ನು ಕತೆಯಲ್ಲಿ ಹೆಣೆಯಲಾಗಿದೆ.

ಚಿತ್ರದಲ್ಲಿ ದಲಿತ ನಾಯಕ ಪಾತ್ರದಲ್ಲಿ ಪರಭಾಷೆಯ ಪ್ರಶಸ್ತಿ ವಿಜೇತ ನಟ ಸುಲಿಲ್ ಅತ್ಯುತ್ತಮ ಅಭಿನಯ ತೋರಿದ್ದಾರೆ. ತೆರೆಯ ಮೇಲೆ ದೇವನೂರರ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ.

ದಿಲೀಪ್ ರಾಜ್, ಸರ್ದಾರ್ ಸತ್ಯ ಅಭಿನಯ ಪ್ರಶಂಸನೀಯ. ಉಳಿದ ನಟರೂ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಸೋನುಗೌಡ ಮತ್ತು ಸಂಯುಕ್ತ ಪಾತ್ರಕ್ಕೆ ಬೇಕಾದ್ದಕ್ಕಿಂತ ಹೆಚ್ಚು ಗ್ಲಾಮರಸ್ ಆಗಿ ಕಾಣಿಸುತ್ತಾರೆ. ಛಾಯಾಗ್ರಹಣ ಮನಸೆಳೆಯುವಂತಿದೆ. ಇಡೀ ಚಿತ್ರಕ್ಕೆ ಪೂರಕವಾಗಿ ಸುಂದರವಾಗಿ ಕಟ್ಟಿ ಕೊಟ್ಟಿದ್ದಾರೆ ಮುರುಳಿ ಕೃಷ್ಣ. ಈಗಾಗಲೇ ತಮ್ಮ ಚಿತ್ರಗಳಿಗೆ ಪ್ರಶಸ್ತಿಗಳನ್ನು ಪಡೆದಿರುವ ನಿರ್ದೇಶಕ ಕೆ.ಶಿವರುದ್ರಯ್ಯ ಜಾತಿ ಶೋಷಣೆ ಕುರಿತ ಇನ್ನೊಂದು ಚಿತ್ರವನ್ನು ಕನ್ನಡ ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಕಮರ್ಷಿಯಲ್ ಚಿತ್ರಗಳ ನಡುವೆ ಎಷ್ಟೋ ಜನರಿಗೆ ಗೊತ್ತಿಲ್ಲದ ಸಮಾಜದಲ್ಲಿ ವ್ಯವಸ್ಥೆಯನ್ನು ಮಾರಿಕೊಂಡವರು ಚಿತ್ರ ಎಳೆಯಾಗಿ ತೋರಿಸುತ್ತದೆ.

**ಶಾಂತರಾಜು**

## ಪ್ರೀತಿಯಗಾಳಿ ಬೀಸುತಿದೆ

ಪ್ರೀತಿಯಗಾಳಿ ಬೀಸುತಿದೆ ಹಟ್ಟಿ ಮೊಹಲ್ಲಾಗಳ ನಡುವೆ
ಗಡಿಗಳ ಮೀರಿ ಗೆಳೆತನವಾ ಮಾಡೋಣ ಬಾ
ನನ್ನ ಸಂಗಾತಿಯೇ..
ಸ್ಪೃಶ್ಯಾಸ್ಪೃಶ್ಯತೆ ಬೇಲಿಗಳು ಜಾತಿ–ಧರ್ಮದ ಗೋಡೆಗಳು
ಎಲ್ಲವ ದಾಟಿ ಎತ್ತರಕೆ ಹಾರೋಣ ಬಾ
ನನ್ನ ಸಂಗಾತಿಯೆ...
ಅವ್ವನ ಪ್ರೀತಿಗೆ ಕೈ ಮುಗಿದು, ಅಪ್ಪನ ಮಮತೆಗೆ ಶರಣೆಂದು
ಹೊಸಿಲ ದಾಟಿದ ಹೊಸ ಸಂಬಂಧ ಕಟ್ಟೋಣ ಬಾ
ನನ್ನ ಸಂಗಾತಿಯೆ...
ನನ್ನ ನಿನ್ನಾ ಈ ಸ್ನೇಹ ಒಪ್ಪದಿರಬಹುದು ಸಮಾಜ
ತಪ್ಪೆಂದಾದರೆ ಆಗಲಿ ತಪ್ಪ ಮಾಡೋಣ ಬಾ
ನನ್ನ ಸಂಗಾತಿಯೆ...
ನೆನ್ನೆಯ ತಪ್ಪು ಇಂದು ಸರಿ ಇಂದಿನ ತಪ್ಪು ನಾಳೆ ಸರಿ,
ಕಾಲ ದೇಶಕ್ಕೆ ಬದಲಾಗುವುದು ತಪ್ಪು–ಸರೀ....
ನನ್ನ ಸಂಗಾತಿಯೆ..
ಬದಲಾವಣೆಯಲಿ ನೋವು ಇದೆ, ಮೌಲ್ಯಗಳ ಸಂಘರ್ಷವಿದೆ
ಇಂದಲ್ಲ ನಾಳೆ ಬದಲಾಗುವುದು ಜನ–ಮನಾ
ನನ್ನ ಸಂಗಾತಿಯೆ...
ಬದಲಾಗದಿದ್ದರೆ ನಾವಿಂದು ಜಗವಾ ಬದಲಾಯಿಸುವೆವೆಂದು
ಬದಲಾವಣೆಯು ಶುರುವಾಗುವುದು ನಮ್ಮಿಂದಲೇ....
ನನ್ನ ಸಂಗಾತಿಯೆ....
(ಪ್ರೀತಿಯ ಗಾಳಿ)

**ಸುನೀಲ್**



ಮಹಿಳಾ ಮತ್ತು ಮಕ್ಕಳ ದಸರಾದ ವೇದಿಕೆಯಲ್ಲಿ ಮಕ್ಕಳ ಕಲರವ


### ಇ–ಟೆಂಡರ್ ಆಹ್ವಾನಿಸಿ ಸೂಚನೆ

ಪ್ರಧಾನ ನಿರ್ಮಾಣ ಅಭಿಯಂತರ (ಆರ್ ಅಂಡ್ ಡಿ), ದೆಹಲಿ ಡಿಸಿಡಬ್ಲ್ಯು ಅಂಡ್ ಇ (ಡಿಆರ್‌ಡಿಒ) ಇವರು ಅರ್ಹತಾ ಮಾನದಂಡ ಹೊಂದಿರುವವರಿಂದ ಕೆಳಕಂಡ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದ್ದಾರೆ:

**"ದೆಹಲಿಯ ಎಸ್‌ಎಸ್‌ಪಿಎಲ್‌ನಲ್ಲಿನ ಸಿಲಿಕಾನ್ ಕಾರ್ಬೈಡ್ ಕ್ಲೀನ್‌ರೂಂ ಫೆಸಿಲಿಟಿಗಾಗಿ ಯುಟಿಲಿಟಿ ಸೇವೆಗಳನ್ನು ಒದಗಿಸುವುದು".**

| | | |
|---|---|---|
| ಅಂದಾಜು ಮೊತ್ತ | : | ರೂ. 104.72 ಲಕ್ಷಗಳು |
| ಅರ್ನೆಸ್ಟ್ ಹಣ | : | ರೂ. 2,09,450/– |
| ಪೂರ್ಣಗೊಳಿಸಲು ಅವಧಿ | : | 08 (ಎಂಟು) ತಿಂಗಳುಗಳು |

ಬಿಒಕ್ಯೂನೊಂದಿಗಿರುವ ಸಂಪೂರ್ಣ ಬಿಡ್ ಮತ್ತು ಇತರೆ ಅಗತ್ಯ ದಾಖಲೆಗಳು ಸಿಪಿಪಿ ಪೋರ್ಟಲ್ (www.eprocure.gov.in) ನಲ್ಲಿ ಲಭ್ಯವಿರುತ್ತವೆ. ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಎನ್‌ಐಟಿನಲ್ಲಿಯೇ ನೀಡಲಾಗಿರುತ್ತದೆ.

davp 10301/11/0270/1718


## ಜಾಹಿರಾತುಗಳು










